ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾವು.

ತಾರೀಖು 11ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ — ದೇವನಹಳ್ಳಿ ತಾಲ್ಲೂಕು ಜೋಡಿ ಸನ್ಯಾಸಿಹಳ್ಳಿ ಗ್ರಾಮದಲ್ಲಿ ಮೆಸರ್ಸ್ ಬ್ಲೇಕ್ ಸಾಹೇಬರಿಗೆ ಇರುವ ಹಕ್ಕು ಬಾಧ್ಯತೆಯನ್ನು ರೆವಿನ್ಯೂ ಬಾಕಿಗೋಸ್ಕರ 1903ನೇ ಆಗಸ್ಟ್ 20ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು 1903ನೇ ಇಸವಿ ಜುಲೈ 23ನೇ ಮತ್ತು೦ 29ನೇ ನಂಬರ್ ಮೈಸೂರ ಗೆಜೆಟ್ II೯ ಭಾಗದ 396ನೇ ಪೇಜಿನಲ್ಲಿ ಘೋಷಣೆಯಾಗಿರುತ್ತೆ.

ಬೆಂಗಳೂರು ತಾಲ್ಲೂಕು ಯೆಲಹಂಕದ ಹೋಬಳಿ ಜೋಡಿ ಮಲ್ಲಸಂದ್ರ ಗ್ರಾಮವು ಸದರಿ ಜೋಡಿದಾರ ಗಿರಿಯಮ್ಮನವರು ಜೋಡಿ ಮೊಬಲಗು ಸರ್ಕಾರಕ್ಕೆ ಪಾವತಿ ಮಾಡದೆ ತಪ್ಪಿದ್ದರಿಂದ ಆ ತಾಲ್ಲೂಕು ಅಮಲ್ದಾರ್ರ ರೂಬರೂಬು 1903ನೆಯ ಇಸವಿ ಆಗಸ್ಟ್ 20ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1903ನೇ ಇಸವಿ ಜುಲೈ 23ನೇ ಮತ್ತು೦ 29ನೇ ನಂಬರ್ ಮೈಸೂರ ಗೆಜೆಟ್ II೯ ಭಾಗದ 395ನೇ ನಂಬರ್ ಪೇಜಿನಲ್ಲಿ ಪ್ರಸಿದ್ಧಪಡಿಸಲ್ಪಟ್ಟಿದೆ.

ತಾರೀಖು 4ನೇ ಆಗಸ್ಟ್ 1903.

ದೇವನಹಳ್ಳಿ ತಾಲ್ಲೂಕು ಸನ್ಯಾಸಿಹಳ್ಳಿ ಗ್ರಾಮದ ಹರಾಜು ಇಸ್ತಿಹಾರ್ 23—7—03ನೇ ಮತ್ತು೦ ಮೈಸೂರು ಗೆಜೆಟ್ಟಿನ IIನೇ ಭಾಗದ 396ನೇ ನಂಬರ್ ಪಾನಿನಲ್ಲಿ ಘೋಷಿಸಾಗಿರುವದರಲ್ಲಿ ಇರುವ ಷೆಡ್ಯೂಲಿಗೆ ಬದಲಾಗಿ ಈ ಕೆಳಗಿನ ಷೆಡ್ಯೂಲನ್ನು ಓದಿ ಕೊಳ್ಳತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಿನ ಕಿಮ್ಮತ್ತು.	ಜಮೀನು. ನಂಬರ್ ಉಪಠಾ ಜಮೀನಿನ ಹೆಸರು.	ಖುಷ್ಕಿ, ತರೀ ಪ ಫಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಕಂದಾಯ. ರೂ.	ಆ.	ಪೈ.	ಶ್ರೀ ಶಿವಗಂಗಾ ಮಠಕ್ಕೂ ಸರ್ಕಾರಕ್ಕೂ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು		
					ರೂ. ಆ. ಪೈ.								ರೂ.	ಆ.	ಪೈ.
ದೇವನಹಳ್ಳಿ	ದೇವನಹಳ್ಳಿ	ಜೋಡಿ ಸನ್ಯಾಸಿಹಳ್ಳಿ	Mrs. Blake	...	...	ಮೈನರ್ ಇನಾಮಿ ಜಾತಾ ಬಾಕಿ ಗ್ರಾಮ	ಖುಷ್ಕಿ	346	11	564	0	0	2,000	9	2
							ತರಿ	...	....	..	..				
							ಬಾಗಾಯಿತು	...	26	2	0	0	ಈ ಗ್ರಾಮದಲ್ಲಿ ಬಾಕೀದಾರ್ರು ಶ್ರೀ ಶಿವಗಂಗಾ ಮಠದ ತರಫು ಸರ್ಕಾರದಿಂದ ಕೈಯಕ್ಕೊಳ್ಳಸ್ತರ ಪಡದುಕೊಂಡು ಅನುಭವಿಸುತ್ತಿದ್ದ ದರೋಬಸ್ತು ಹಕ್ಕು ಬಾಧ್ಯತೆಗಳನ್ನು ಹರಾಜು ಮಾಡಲ್ಪಡುತ್ತೆ.		
							ಪರಂಬೋಕು	15	33	..	..	..			
							ಜುಮ್ಲಾ ..	362	30	566	0	0			

ಇದರಲ್ಲಿ ಕೊಟ್ಟಿರುವ ತಫ್ಸೀಲ್ ಮೈನರ್ ಇನಾಂ ಜಾತಾ ಬಾಕಿಯನ್ನು ತೋರಿಸುತ್ತೆ.

ಹೆಚ್. ಹೆಚ್. ಸ್ಪಾರ್ಕ್ಸ್, ಡೆಪ್ಯೂಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 2ನೇ ಜುಲೈ 1903.

ಶಿಡ್ಲಘಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳಿಗೆ ಸೇರಿದ ಕಾಯಂಗುತ್ತಾ ಕರಿಯನಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಫಸೀಲ್ ಬಗ್ಗೆ 16—7—1903ನೇ ಮತ್ತು೦ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 372—373ನೇ ನಂಬರ್ ಪೇಜು ನೋಡತಕ್ಕದ್ದು.)

ಇಸ್ತಿಹಾರ್‌ನಾವೆ ತಾರೀಖು 7ನೇ ಜುಲೈ 1903.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರುವ ಕೋಲಾರ ಮತ್ತು ಶಿಡ್ಲಘಟ್ಟದ ತಾಲ್ಲೂಕುಗಳಿಗೆ ಸೇರಿದ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(1) ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ ಜೋಡಿ ಪಾರಕೀಗ್ಯಾನಹಳ್ಳಿ ಗ್ರಾಮ.
(2) ಶಿಡ್ಲಘಟ್ಟದ ತಾಲ್ಲೂಕು ಜಂಗಮಕೋಟೆ ಹೋಬಳಿ ಖಾಯಂಗುತ್ತಾಪುರ ಗ್ರಾಮ.

(ಹೆಚ್ಚು ತಫಸೀಲ ಬಗ್ಗೆ 23—7—1903ನೇ ಮತ್ತು೦ 29ನೇ ನಂಬರ್ ಮೈಸೂರ ಗೆಜೆಟ್ II೯ ಭಾಗದ 398—397ನೇ ನಂಬರ್ ಪೇಜುಗಳನ್ನು ನೋಡತಕ್ಕದ್ದು.)

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 25ನೇ ಜುಲೈ 1903.

1. ಕಂದಾಯದ ಬಾಕೀದಾರರಾದ ಜೋಡಿ ದೊಡ್ಡಗಾಂಡ್ಲಹಳ್ಳಿ ಗ್ರಾಮದ ಶ್ರೀನಿವಾಸ ಚಕ್ರವರ್ತಿ ವಗೈರೇರಿಂದ ಬರಬೇಕಾದ ಜಮೀರ್ ಕಂದಾಯದ ಬಾಕೀಗಾಗಿ ಇಫರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕು ಕಚೇರಿಯಲ್ಲಿ ಸ್ಯ 1903ನೇ ಇಸವಿ ಸೆಪ್ಟಂಬರ್ ಮಾಹೆ 7ನೇ ತಾರೀಖು ಸೋಮವಾರದಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–03ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 616—0—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬ್ತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬ್ತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತನಾಗಿ, ಬಾಕೀದಾರನಾಗಲಿ ಅತನ ತರಫನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರಿ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ಹಿಸ್ಸಾ ನಂಬರ್ ಅಥವಾ ಖಾನೇ ನಂಬರ್ ಅಥವಾ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಂದಾಜು.	ಸರ್ಕಾರಕ್ಕೆ ಬರಬೇಕಾದ ನಿಜವಾದ ಸೊಪ್ಪಿನ ಪೈಕೀ ಬಾಕೀ ಹೊಳಲುಗು. ರೂ. ಆ. ಪೈ.
ಬವರಿಂಗ್‌ಪೇಟೆ	ಕ್ಯಾಸಂಬಳ್ಳಿ	ಜೋಡಿ ದೊಡ್ಡಗಾಂಡ್ಲಹಳ್ಳಿ	ಶ್ರೀನಿವಾಸ ಚಕ್ರವರ್ತಿ ವಗೈರೇರು ...	ರೂ. ಆ. ಪೈ.	ಖುಷ್ಕಿ ತರಿ ಪರಂಪೋಕು	ಖ. ಕೊ. ಪ. 10 1 1 22 3 8 12 16 7	ರೂ. ಆ. ಪೈ. 480 0 0	616 0 0

ಚಕ್ಕುಬಂದಿ

ಪೂರ್ವಕ್ಕೆ—ಚಿನ್ನವರ ಮತ್ತು ಹ|| ಇಲಾಖಾ ಚಿಕ್ಕಗಾಂಡ್ಲಹಳ್ಳಿ ಸರಹದ್ದು
ಪಶ್ಚಿಮಕ್ಕೆ—ಸಂಗನಹಳ್ಳಿ ಮತ್ತು ಹ|| ಇಲಾಖಾ ನಲ್ಲಪರಡ್ಡಿ ಗ್ರಾಮ
ಉತ್ತರಕ್ಕೆ—ಯೆತ್ತೂರು ಮತ್ತು ಚಿಂಚಾಂಡಹಳ್ಳಿ ಸರಹದ್ದು
ದಕ್ಷಿಣಕ್ಕೆ—ಹ|| ಇಲಾಖೆ ಬೋಯನಹಳ್ಳಿ ಮತ್ತು ಸೊಗಡಬಳ್ಳಿ ಸರಹದ್ದು
(ಜಾರೀಯಲ್ಲಿರುವ ಚಿಲ್ಲರೆ ಇನಾಂತಿ ವಿನಹಾ)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯೂಟಿ ಕಮಿಷನರ್.

ತಾರೀಖು 2ನೇ ಜುಲೈ 1903.

ಶಿಡ್ಲಘಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಖಾಯಂಗುತ್ತಾ ಚಿಕ್ಕಬಲ್ಲ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟೆಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(ಹೆಚ್ಚಿನ ತಪಶೀಲು ಬಗ್ಗೆ 16—7—1903ನೇ ಮಾರ್ಕ್ಕಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 374ನೇ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 24ನೇ ಜೂ್ನ 1903.

ಕೋಲಾರ ತಾಲ್ಲೂಕಿಗೆ ಶೇರಿದ ಕಾಯಂಗುತ್ತಾ ರಾಮಾಪುರದ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರ ವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1903ನೇ ಇಸವಿ ಆಗಸ್ಟ್ಟು 11ನೇ ತಾರೀಖಿನಲ್ಲು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಶೀಲು ಬಗ್ಗೆ 16—7—1903ನೇ ಮಾರ್ಕ್ಕಂ 28ನೇ ನಂಬರ್ ಗಜೆಟ್ಟಿನ IIನೇ ಭಾಗದ 371-372ನೇ ನಂಬರ್ ಪೇಜು ನೋಡತಕ್ಕದ್ದು.

ಎಚ್. ದಾಸಪ್ಪ,
ಫೂರ್ ಡೆಪ್ಯೂಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರ ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕು ಜೋಡಿ ಹುಳಿಸಂದ್ರ ಗ್ರಾಮವು 1903ನೇ ಇಸವಿ ಜುಲೈ ಮಾಹೆ 30ನೇ ಮಾರ್ಕ್ಕಂನಲ್ಲಿ ತಿಪಟೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 30ನೇ ಮಾರ್ಕ್ಕಂ 30ನೇ ನಂಬರ್ ಮೈಸೂರ ಗೆಜೆಟ್ಟಿನಲ್ಲಿ ಫಾಯಿಷ್ ಆಗಿ ಇದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರ ಡಿಸ್ಟ್ರಿಕ್ಟು ಮದ್ದಗಿರಿ ತಾಲ್ಲೂಕು ಕಾಯಂಗುತ್ತಾ ಮ್ಯೂಕೆತಿಮ್ಮನಹಳ್ಳಿ ಗ್ರಾಮವು 1903ನೇ ಇಸವಿ ಜುಲೈ ಮಾಹೆ 30ನೇ ಮಾರ್ಕ್ಕಂನಲ್ಲಿ ಮದ್ದಗಿರಿ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 30ನೇ ಮಾರ್ಕ್ಕಂ 30ನೇ ನಂಬರ್ ಮೈಸೂರ ಗೆಜೆಟ್ಟಿನಲ್ಲಿ ಫಾಯಿಷ್ ಆಗಿ ಇದೆ.

ಎಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 20ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಎಡತೊರೆ ತಾಲ್ಲೂಕು ರಾಮಸಮುದ್ರದ ನಾಲಾ ಬಡಾವಣೆಗಾಗಿ ಅಕ್ವೈರು ಮಾಡಿಕೊಂಡಿರುವ ಜಮೀನುಗಳ ಕಂಪೆನ್ಸೇಷನ್ ಮೊಬಲಗು ಇದೆ ಸಾಲ್ ಆಗಸ್ಟು ಗುರ್ಸೀಲಾಗಾಯಿತು ಪಾವತಿ ಮಾಡಲ್ಪಡುತ್ತೆ.

ಸದರಿ ಜಮೀನುಗಳಲ್ಲಿ ಹಕ್ಕು ಯಾ ಬಾಧ್ಯತೆವುಳ್ಳವರು ತಮ್ಮಲ್ಲಿರುವ ವಿಶಿಷ್ಟ ಟೈಟಲ್ ಡೀಡುಯಾನೆ ದಾಖಲಾತುಗಳು ನಿತಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ನಮ್ಮ ರೂಬರೂ ಹಾಜರಾಗಿ ವಾಂಗ್ಮೂಲ ಕೊಟ್ಟು ತಮ್ಮ ಹಕ್ಕನ್ನು ಊರ್ಜಿತಪಡಿಸಿಕೊಟ್ಟು ವಿಧಾಯಕವಾದ ಕಂಪೆನ್ಸೇಷನ್ ಮೊಬಲಗನ್ನು ಪಡಿಯಬಹುದು.

ಬಿ. ಕೃಷ್ಣರಾವ್,
ಅಡಿಷನಲ್ ಅಸಿಸ್ಟೆಂಟ್ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟಿನಲ್ಲಿ.

ಸ್ರ 1903—1904ನೇ ಇಸವಿ ಅರ್ಜೀ ನಂಬರ್ 25.

ಮೃತಪಟ್ಟ ಚಿಕ್ಕಗಿರೀಸಾಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಲಕ್ಷ್ಮಣಸಾ ಮೈನರ್, ಗಾರ್ಡಿಯ್ ಜವನಾಬಾಯಿ, ಮೃತಪಟ್ಟ ಸದರೀ ಚಿಕ್ಕಗಿರೀಸಾಯವರಿಗೆ ಮುಖ್ಯವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಚಿಕ್ಕಗಿರೀಸಾಯವರ ಜೆಂವಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಣಸಾಯವರ ಅರ್ಜಿಯನ್ನು ಸ್ರ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯಾತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಗಿರೀಸಾಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1903ನೇ ಇಸವಿ ಜುಲೈ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟು ಜಡ್ಜ್.